**Mis**.6/22 **ಸಿ.ಡಬ್ಲ್ಯೂಃ 1**

<u>ದಿನಾಂಕಃ 03.02.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.</u>

## <u>ಪಾಟೀಸವಾಲುಃ ಎದುರುದಾರರ ಪರ ವಕೀಲರಾದ ಶ್ರೀ ಸಿ.ಎಸ್ ಅವರಿಂದ</u>–

1. ನಾನು ನನ್ನ ತಾಯಿ ಪುಟ್ಟಮ್ಮ ತುಂಬಾ ವರ್ಷಗಳಿಂದ ಅನ್ಯೂನ್ಯವಾಗಿದ್ದೇವೆ ಎಂದರೆ ಸರಿ. ಪುಟ್ಟಮ್ಮ ಅವರು ಹಾಕಿರುವ ದಾವೆ ಬಗ್ಗೆ ನನಗೆ ಗೊತ್ತಿತ್ತು ಎಂದರೆ ಸರಿ. ನನ್ನ ತಾಯಿ ಪುಟ್ಟಮ್ಮ ಅವರನ್ನು ನ್ಯಾಯಾಲಯಕ್ಕೆ ಹಾಗೂ ವಕೀಲರ ಕಚೇರಿಗೆ ನಾನೇ ಕರೆದುಕೊಂಡು ಹೋಗುತ್ತಿದ್ದೆ. ದಾವೆ ಬಗ್ಗೆ ನನಗೆ ಮೊದಲಿನಿಂದಲೂ ಗೊತ್ತಿತ್ತು ಎಂದರೆ ಸರಿ. ಸದರಿ ದಾವೆಯ ವಿದ್ಯಾಮಾನಗಳು ನನಗೆ ಹಾಗೂ ನನ್ನ ತಾಯಿ ಪುಟ್ಟಮ್ಮ ಅವರಿಗೆ ಗೊತ್ತಿತ್ತು ಎಂದರೆ ಸರಿ.

2. ಸದರಿ ದಾವೆಯಲ್ಲಿ ನ್ಯಾಯಾಲಯ ನಮಗೆ ಸಾಕಷ್ಟು ಕಾಲಾವಕಾಶ ನೀಡಿದ ನಂತರ ನಾವು ನ್ಯಾಯಾಲಯಕ್ಕೆ ಹಾಜರಾಗದೆ ಇದ್ದರಿಂದ ದಾವೆ ವಜಾ ಆಗಿರುತ್ತದೆ ಎಂದರೆ, ಆ ಸಮಯ ನನ್ನ ತಾಯಿ ಪುಟ್ಟಮ್ಮ ಅವರಿಗೆ ಬಿ.ಪಿ. ಹಾಗೂ ಶುಗರ್ ಹೆಚ್ಚಾಗಿದ್ದು, ನಂತರ ಕರೋನಾ ಬಂದಿದ್ದರಿಂದ ನಾವು ನ್ಯಾಯಾಲಯಕ್ಕೆ ಬರಲು ಆಗಿರುವುದಿಲ್ಲ. ಈ ಬಗ್ಗೆ ನಾನು ನನ್ನ ತಾಯಿ ಪುಟ್ಟಮ್ಮ ಅವರಿಗೆ 2021–ಫೆಬ್ರವರಿಯಲ್ಲಿ ಚಿಕಿತ್ಸೆ ಕೊಡಿಸಿರುತ್ತೇನೆ. ಈ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ನೀಡಿಲ್ಲ.

3. ಆ ಸಮಯ ನನ್ನ ತಾಯಿ ಪುಟ್ಟಮ್ಮ ಅವರು ಆರೋಗ್ಯವಾಗಿದ್ದರು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾವೆ ನಡೆಯುತ್ತಿದ್ದ ಸಮಯ ನನ್ನ ತಾಯಿಯಿಂದ ಅಧಿಕಾರ ಪತ್ರ ಪಡೆಯಲು ತೊಂದರೆ ಇತ್ತಾ ಎಂಬ ಪ್ರಶ್ನೆಗೆ ನನ್ನ ತಾಯಿ ಪುಟ್ಟಮ್ಮ ಅವರಿಗೆ ಬಿ.ಪಿ. ಹಾಗೂ ಶುಗರ್ ಹೆಚ್ಚಾಗಿದ್ದರಿಂದ ಪಡೆಯಲು ಆಗಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

4. ನಿಪಿ.1 ಅಧಿಕಾರ ಪತ್ರವನ್ನು ನಮ್ಮ ವಕೀಲರ ಕಚೇರಿಯಲ್ಲಿ ಬರೆಯಿಸಿರುತ್ತೇವೆ. ಆ ಸಮಯ ನನ್ನ ತಾಯಿಯನ್ನು ನಮ್ಮ ವಕೀಲರ ಕಚೇರಿಗೆ ಕರೆದುಕೊಂಡು ಬಂದಿದ್ದೆ. ಅವರು ಆರೋಗ್ಯವಾಗಿ ಚೆನ್ನಾಗಿ ಓಡಾಡಿಕೊಂಡು ಇದ್ದರು ಎಂದರೆ ಸರಿಯಲ್ಲ. ಅವರಿಗೆ ಕಣ್ಣು ಕಾಣಿಸುತ್ತಿರಲಿಲ್ಲ. ಈ ವಿಷಯವನ್ನು ನನ್ನ ವಕೀಲರಿಗೆ ತಿಳಿಸಿರುತ್ತೇನೋ ಇಲ್ಲವೋ ನನಗೆ ಗೊತ್ತಿಲ್ಲ. ನನ್ನ ತಾಯಿ ಆರೋಗ್ಯವಾಗಿದ್ದು, ಅವರು ನ್ಯಾಯಾಲಯಕ್ಕೆ ಬಂದರೆ ಸತ್ಯಾಂಶ ಗೊತ್ತಾಗುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯ ನಮಗೆ ಸಾಕಷ್ಟು ಕಾಲಾವಾಕಾಶ ನೀಡಿದ್ದರು ನಾವು ನ್ಯಾಯಾಲಯದಲ್ಲಿ ಹಾಜರಾಗದೆ ಇದ್ದರಿಂದ ದಾವೆ ವಜಾ ಆಗಿರುತ್ತದೆ ಎಂದರೆ ಪುಟ್ಟಮ್ಮ ಅವರು ತೀರಿಹೋಗಿದ್ದು, ಸದರಿ ದಾಖಲಾತಿಗಳನ್ನು ಒದಗಿಸಿಕೊಳ್ಳಲು ನಮಗೆ ತಡ ಆಗಿರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ.

5. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಏನೂ ಬರೆದಿದೆ ಕೇಳಿ ತಿಳಿದುಕೊಂಡಿಲ್ಲ. ನನಗೆ ಓದಲು-ಬರೆಯಲು ಬರುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಕರೋನಾ ದಿಃ 18.03.2020 ರಂದು ಆರಂಭವಾಗಿರುತ್ತದೆ ಎಂದರೆ ನನಗೆ ದಿನಾಂಕ ಮತ್ತು ತಿಂಗಳು ನೆನಪಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಶಿರಿನ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.